ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3986

ಮಾನ್ಯ ಸದಸ್ಯರ ಹೆಸರು: ಶ್ರೀವೆಂಕಟಮುನಿಯಪ್ಪ ಬಿ.ಪಿ.

ಉತ್ತರಿಸುವವರು : ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)

ಸಂಖ್ಯೆ	ಪ್ರಶ್ನೆ	ಉತ್ತರ
1	ಬಂಗಾರಪೇಟೆ ತಾಲ್ಲೂಕಿನಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾಂಗಣದ ಕಾಮಗಾರಿ 3-4 ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ
2	ಬಂದಿದ್ದಲ್ಲಿ, ಕಾಮಗಾರಿ ಅಪೂರ್ಣ ಹಂತದಲ್ಲಿ ನಿಲ್ಲಿಸಲು ಕಾರಣ ಗಳೇನು;	ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕು ಕ್ರೀಡಾಂಗಣ ನಿರ್ಮಾಣವನ್ನು ರೂ.19.80 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಕ್ರೀಡಾಂಗಣ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಮಾಡುವುದಿಲ್ಲವೆಂಬ ಷರತ್ತಿನ ಮೇರೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಹಾಗೂ ಜಿಲ್ಲಾ ಪಂಚಾಯತ್ ವಲಯದಿಂದ ರೂ. 10.00 ಲಕ್ಷಗಳನ್ನು ಪಡೆದು, ಇನ್ನುಳಿದ ಅನುದಾನವನ್ನು ಕೇಂದ್ರಸರ್ಕಾರದ ಅನುದಾನ ಹಾಗೂ ಸಾರ್ವಜನಿಕ ವಂತಿಕೆ ಮೂಲಕ ಪಡೆದು ಕ್ರೀಡಾಂಗಣ ನಿರ್ಮಾಣವನ್ನು ಪೂರ್ಣಗೊಳಿಸಬೇಕೆಂದು ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಆದೇಶದಲ್ಲಿ ಆದೇಶಿಸಿದೆ. ಆದ್ದರಿಂದ ಕ್ರೀಡಾಂಗಣ ಪೂರ್ಣಗೊಳಿಸಲು

ಸಂಖ್ಯೆ	ಪ್ರಶ್ನೆ	ಉತ್ತರ
		ಬೇಕಾಗುವ ಅನುದಾನ ಸಂಗ್ರಹವಾಗಿರದ ಕಾರಣ ಕ್ರೀಡಾಂಗಣ ನಿರ್ಮಾಣ ಕಾರ್ಯ ಅಪೂರ್ಣ ಹಂತದಲ್ಲಿದೆ.
3	ಮುಂದೆ ಯಾವಾಗ ಈ ಕಾಮಗಾರಿ ಪುನರ್ ಪ್ರಾರಂಭಿಸಲಾಗುವುದು;	ಕ್ರೀಡಾಂಗಣ ನಿರ್ಮಾಣಕ್ಕಾಗಿ ಬೇಕಾಗುವ ಅನುದಾನ ಸಂಗ್ರಹಿಸಿ ತಾಲ್ಲೂಕು ಕ್ರೀಡಾಂಗಣ ಸಮಿತಿ ಕಾಮಗಾರಿಯನ್ನು ಪುನರ್ ಪ್ರಾರಂಭಿಸಲು ಸೂಚಿಸಲಾಗುವುದು.
4	ಇದುವರೆಗೂ ಈ ಕಾಮಗಾರಿಗಾಗಿ ಬಿಡುಗಡೆಯಾದ ಮೊಬಲಗೆಷ್ಟು?	ಕ್ರೀಡಾಂಗಣ ನಿರ್ಮಾಣಕ್ಕಾಗಿ ಜಿಲ್ಲಾ ಪಂಚಾಯತ್ ವಲಯದಿಂದ ರೂ. 8.50 ಲಕ್ಷಗಳನ್ನು ಲೋಕೋಪಯೋಗಿ ಇಲಾಖೆಯವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

ಪ್ರಶ್ನೆ ಸಂಖ್ಯೆ:322 (3996)

– ಉತ್ತರದ ಪ್ರತಿಯನ್ನು ಲಗತ್ತಿಸಿದೆ. –

ಶ್ರೀ ಬಿ.ಪಿ. ವೆಂಕಟಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಇದಕ್ಕೆ ಒಟ್ಟು ಕ್ರೀಡಾಂಗಣಕ್ಕೆ 8.50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಇದನ್ನು ಯಾವಾಗ ಮಾಡಿದರು? ಯಾವ ವರ್ಷ ಮಾಡಿದರು? ಯಾವ ತಿಂಗಳು ಮಾಡಿದರು? ಯಾವ ದಿನಾಂಕದಂದು ಮಾಡಿದರು? ಏನು ಮಾಹಿತಿಯನ್ನು ಹೇಳಲಿಲ್ಲ ಅಲ್ಲಿ 8.50 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದರೂ ಇನ್ನೂ ಕೂಡ ಕೆಲಸವನ್ನು ಪ್ರಾರಂಭಮಾಡಿಲ್ಲ. ಅದನ್ನು ಏಕೆ ಮಾಡಿಲ್ಲ? ಯಾವ ಕಾರಣದಿಂದ ಮಾಡಿಲ್ಲ? ಎನ್ನುವ ಬಗ್ಗೆ ಸರಿಯಾದ ಮಾಹಿತಿ ಸಚಿವರ ಕಡೆಯಿಂದ ಇಲ್ಲ.

ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್: ಮಾನ್ಯ ಉಪಾಧ್ಯಕ್ಷರೇ, ಈ ಕ್ರೀಡಾಂಗಣಕ್ಕೆ ಸರ್ಕಾರದಿಂದ 15 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಹತ್ತು ಲಕ್ಷ ರೂಪಾಯಿಗಳು 3–5–97ರಲ್ಲಿ ಬಿಡುಗಡೆಯಾಗಿದೆ. ರಾಜ್ಯ ವಲಯದಿಂದ 31–3–2001ಕ್ಕೆ ಐದು ಲಕ್ಷ ರೂಪಾಯಿಗಳನ್ನು ಒದಗಿಸ ಲಾಗಿದೆ.

ಮತ್ತು ಈ ಹಣದ ಬ್ಯಾಂಕಿನ ಬಡ್ಡಿಯಿಂದ 2.25 ಲಕ್ಷ ರೂಪಾಯಿ ಗಳನ್ನು ಸಹಿತ ಒದಗಿಸಲಾಗಿದೆ. ಒಟ್ಟು ಕ್ರೀಡಾಂಗಣಕ್ಕೆಂದು 17.25 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಈ ಎಲ್ಲಾ ಕೆಲಸವೂ ಮುಗಿದಿದೆ. ಕೆಲವೇ ಕೆಲಸಗಳಾದ ಪೇಯಿಂಟಿಂಗ್, ಕಾಂಪೌಂಡ್, ಮತ್ತು ನೀರಿನ ಸರಬರಾಜು, ಒಳಚರಂಡಿ ಮಾತ್ರ ಉಳಿದಿದೆ. ನಾವು ಅದರ ಬಗ್ಗೆಯೂ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಬಿ.ಪಿ. ವೆಂಕಟಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೇ, ಸುಮಾರು ಕೆಲಸಗಳು ಹಾಗೆಯೇ ಬಾಕಿ ಇವೆ. ದಿನಬೆಳಗಾದರೆ ನಾನು ಬರುವ ದಾರಿಯಲ್ಲಿ ಅದು ಇದೆ. ಅರ್ಧ ಕೆಲಸವೂ ಕೂಡ ಸಂಪೂರ್ಣವಾಗಿ ಅಲ್ಲಿ ಆಗಿಲ್ಲ. ಯಾವಾಗ ಮಾಡುತ್ತಾರೆ? ಅದನ್ನು ಎಂದು ಮಾಡುತ್ತಾರೆ? ಎಂದು ಸರಿಯಾದ ಉತ್ತರವನ್ನು ಮಾನ್ಯ ಸಚಿವರು ನೀಡಬೇಕು.

ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್: ಮಾನ್ಯ ಉಪಾಧ್ಯಕ್ಷರೇ, ನಾವು ಅದಕ್ಕೆ 17.25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಒಟ್ಟು ಇದರ ವೆಚ್ಚ 19.80 ಲಕ್ಷ ರೂ. ಇದೆ. ಉಳಿದ ಹಣವನ್ನು ನಾವು ಪೂರೈಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಶೀಘ್ರವಾಗಿ ಇದನ್ನು ಪೂರ್ಣಗೊಳಿಸುತ್ತೇವೆ

ಉಪಾಧ್ಯಕ್ಷರು: ಶ್ರೀ ಲಾಲಾಜಿ ಆರ್. ಮೆಂಡನ್ ಅವರ ಪ್ರಶ್ನೆ

–ಮಾನ್ಯ ಸದಸ್ಯರು ಈ ಹಂತದಲ್ಲಿ ಗೈರುಹಾಜರಾಗಿದ್ದರು.